**1ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ**

**ಗೋಕಾಕ**

**ಸಾಕ್ಷಿಗೆ ದಿನಾಂಕಃ 20-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

ಸಿಸಿ ನಂಬರ- 889/2020

ಸಿಡಬ್ಲು1 ಪಿಡಬ್ಲು- 4

| | | |
|---|---|---|
| ಸಾಕ್ಷಿದಾರರ ಹೆಸರು | - | ಸಹದೇವ ಪುಂಡಲಿಕ ನಾಯ್ಕು |
| ವಯಸ್ಸು | - | 41 ವರ್ಷ |
| ಉದ್ಯೋಗ | - | ಒಕ್ಕಲುತನ |
| ಸಾಕೀನ | - | ಮೇಕಳಿ |

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ಚಾಸಾ- 2 ರಿಂದ 5, 8 ರಿಂದ 10 ರವರ ಪರಿಚಯವಿರುತ್ತದೆ. ಆರೋಪಿ ಪರಿಚಯವಿರುತ್ತದೆ. ಮೃತಿ ಸಿದ್ದಪ್ಪಾನಾಯ್ಕು ನನ್ನ ಚಿಕ್ಕಪ್ಪ

2) 2019ನೇ ಸಾಲಿನಲ್ಲಿ ಉದಗಟ್ಟಿ ಉದ್ದಮ್ಮ ದೇವಿ ದೇವಸ್ಥಾನಕ್ಕೆ ನಾನು ಹಾಗೂ ನನ್ನ ಚಿಕ್ಕಪ್ಪಾ ಸೇರಿ ಕೆಎ-23 ಯು-3321 ಮೋಟರ ಸೈಕಲನಲ್ಲಿ 11 ಗಂಟೆ ಗ ಹೋಗುತ್ತಿದಾಗ, ಸಜ್ಜಾಳ ಕ್ರಾಸ ಹತ್ತಿರ ನನ್ನ ಚಿಕ್ಕಪ್ಪಾ ಶೌಚಾಲಾಯಕ್ಕೆ ಹೋಗಿ ಬರುವಾಗ ಕ್ರೂಸರ ಗಾಡಿ ಸಂಖ್ಯೆ ಕೆಎ-33 ಎಮ್ 592 ಯು ಬಂದು ನನ್ನ ಚಿಕ್ಕಪ್ಪ ರಸ್ತೆ ದಾಟುತ್ತಿದ್ದಾಗ ಡಿಕ್ಕಿ ಪಡಿಸಿ ಅಪಘಾತವಾಗಿದ್ದು ಅವರಿಗೆ ಹಣೆಗೆ ಭಾರಿ ಪೆಟ್ಟಾಗಿ ಕೆಳಗೆ ಬಿದ್ದಿದ್ದು, ಕ್ರೂಸರ ಗಾಡಿ ಚಾಲಕ ಗಾಡಿ ನಿಲ್ಲಿಸಿಬಂದಿದ್ದು ನನ್ನ ಚಿಕ್ಕಪ್ಪನನ್ನು ನೋಡಿ ಹೋದನು ಆಇನ ಹೆಸರು ಕೇಳಲಾಗಿ ರಾಯಪ್ಪಾ ಕೇಮ್ಮಕೋಲ ಎಂದು ಹೇಳಿದ್ದು. ನಂತರ ನಾನು 108 ಎಮ್ಬುಲೇನ್ಸಗೆ ಕರೆ ಮಾಡಿ ಕರೆಯಿಸಿ ನನ್ನ ಚಿಕ್ಕಪ್ಪನನ್ನು ಉಮ್ರಾಣಿ ಆಸ್ಪತ್ರಗೆ ಕರೆದಕೊಂಡು ಹೊಗಿ ನಂತರ ಹೆಚ್ಚಿನ

ಚಿಕಿತ್ಸೆಗೆಗಾಗಿ ಲೇಕವ್ಹಿವ ಆಸ್ಪತ್ರೆ ಬೆಳಗಾವಿಗೆ ಕರೆದುಕೊಂಡು ಹೋದೆನು ಆದರೆ ನನ್ನ ಚಿಕ್ಕಪ್ಪಾ ಚಿಕಿತ್ಸೆ ಸಮಯದಲ್ಲಿ ಫಲಕಾರಿಯಾಗಿದೆ ಮೃತ ಪಟ್ಟಿರುತ್ತಾರೆ. ನಂತರ ಆಸ್ಪತ್ರೆಯವರು ಶವ ಪಂಚಾನಾಮೆಯನ್ನು ಜರುಗಿಸಿ ಮೃತ ದೇಹವನ್ನು ನಮಗೆ ಹಸ್ತಾಂತರಿಸಿದರು. ಅದೆ ದಿನ ನಾನು ಠಾಗೆಣೆ ಹೋಗಿ ದೂರನ್ನು ಸಲ್ಲಿಸಿಸುತ್ತೇನೆ. ಮರು ದಿನ ಪೋಲಿಸರು ಅಪಘಾತ ಸ್ಥಳಕ್ಕೆ ಬಂದು ಚಾಸಾ-4 ಮತ್ತು 5ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿ ಛಾಯಾಚಿತ್ರಗಳನ್ನಲು ತೆಗೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ಪೂಲಿಸರು ಮುಂದು ಹೇಳಿಕೆ ನೀಡಿರುತ್ತೇನೆ.

3) ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿ ನಿಪಿ-3ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.4 ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ದೂರಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕ್ರೂಸರ ವಾಹನವಿರುವ ಛಾಯಾಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು 4ನೇ ತರಗತಿ ವರೆಗೆ ಕಲಿತಿರುತ್ತೇನೆ. ನನಗೆ ಓದಲು ಬರೆಯ ಬರುತ್ತದೆ. ನಿಪಿ-5ನ್ನು ನಾನು ಬರೆದಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ತೋರಿಸಿರುವವರ ಬಗ್ಗೆ ಮಾಹಿತಿ ಇರುತ್ತದೆ. ಚಾಸಾ-3 ರಿಂದ 5, 8 ರಿಂದ 10 ರವರು ನಮ್ಮ ಊರಿನವರು ಎಂದರೆ ಸರಿ. ಸದರಿ ಅವರು ಸಜ್ಜಾಳದವರಾಗಲಿ, ಕಲಾರಕೋಪ್ಪದವರಾಗಿಲಿ ಇರುವುದಿಲ್ಲ ಎಂದರೆ ಸರಿ. ನಿಪಿ-5ನ್ನು ಪೋಲಿಸ ಠಾಣೆಯಲ್ಲಿ ಬರೆದಿರುತ್ತದೆ ಎಂದರೆ ಸರಿ.

ನಿಪಿ–5ಕ್ಕೆ ನಾನು ಖಾಲಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–5ನ್ನು ಬರೆಯುವ ಸಮಯದಲ್ಲಿ ಹಾಜರಿದ್ದ ಪೋಲಿಸ ಸಿಬ್ಬಂಧಿಗಳ ಪರಿಚಯವಿರುವುದಿಲ್ಲ. ಚಾಸಾ–9ರವರಿಗೆ ನಿಪಿ–5ನ್ನು ಬರೆಯಲು ಪೋಲಿಸರೆ ಹೇಳಿಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ–5ಕ್ಕೆ ಚಾಸಾ–9ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ.

2. ಘಟನಾ ಸ್ಥಳ ದೊಡ್ಡರಸ್ತೆ ಆಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಮೇಲೆ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಲ್ಲಿ ದೂರದಿಂದ ಬರುವ ವಾಹನಗಳು ಸರಿಯಾಗಿ ಕಾಣುತ್ತವೆ ಎಂದರೆ ಸರಿ. ನಿಪಿ–4ರಲ್ಲಿ ನಾನು ತೋರಿಸುತ್ತಿರುವ ಸ್ಥಳವು ರಸ್ತೆಯಿಂದ ಆಚೆಗೆ 4 ಅಡಿ ಹೊರಗೆ ಇರುತ್ತದೆ ಎಂದರೆ ಸರಿ. ನಿಪಿ–4ರಲ್ಲಿ ಇರುವ ರಸ್ತೆ ಪೂರ್ವ ಪಶ್ಚಿಮಾಭಿಮುಖಾವಾಗಿರುತ್ತದೆ ಎಂದರೆ ಸರಿ. ಅದರಲ್ಲಿ ನಾನು ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿ. ಸದರಿ ರಸ್ತೆಯ ಮೇಲೆ ಕಲಾರಕೊಪ್ಪ ಕಡೆಯಿಂದ ಗೋಕಾಕಿನಡೆಗೆ ದಕ್ಷಿಣ ದಿಕ್ಕಿನಿಂದ ವಾಹನಗಳು ಬರುತ್ತವೆ ಎಂದರೆ ಸರಿ. ನಾನು ನಿಪಿ–4ರಲ್ಲಿ ತೋರಿಸುತ್ತಿರುವ ಜಾಗವು ರಸ್ತೆಯ ಉತ್ತರ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ನಾನು ಮೋದಲ ಬಾರಿಗೆ ಕ್ರೂಸರ ವಾಹನವನ್ನು ದಿಃ 22–12–2019ರಂದು ನೋಡಿರುತ್ತೇನೆ ಎಂದರೆ ಸರಿಯಲ್ಲ, ಘಟನೆ ದಿನವೆ ನೋಡಿರುತ್ತೇನೆ. ಅಪಘಾತ ಸ್ಥಳದಲ್ಲಿ ಜಮಾಯಿಸಿದ್ದ ಜನರ ಪರಿಚಯ ಇರುವುದಿಲ್ಲ ಕೆವಲ ಅವರನ್ನು ನೋಡಿರುತ್ತೇನೆ. ನಿಪಿ–5ರಲ್ಲಿ ಜನ ಜಮಾಯಿಸಿದ ಬಗ್ಗೆ ಬರೆಸಿರುವುದಿಲ್ಲ ಎಂದರೆ ಸರಿ.

3. ನಾನು ಚಾಲನಾ ಪರವಾಣಿಗೆ ಪತ್ರವನ್ನು ಹೊಂದಿದ್ದು, ಅದನ್ನು ತನಿಖಾ ಅಧಿಕಾರಿಗೆ ನೀಡಿದ್ದೆ, ನನ್ನ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಸಜ್ಜಾಳ ಕ್ರಾಸದಲ್ಲಿ 4 ರಸ್ತೆಗಳು

ಕೂಡುತ್ತವೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ರಸ್ತೆ ತಡೆಗಳು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ರಸ್ತೆ ತಡೆಗಳುವು ಇರುವ ಕಾರಣ ಮತ್ತು ಜನರು ಅಡ್ಡಾಡುವುದರಿಂದ ವಾಹನಗಳುವು ನಿದಾನವಾಗಿ ಚಲಿಸುತ್ತವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಚೈತ್ರಾ ಕುಲಕರ್ಣಿ)
ಪ್ರ.ದಿ.&ನ್ಯಾದಂ., ಗೋಕಾಕ.